X. 1907ನೆ ಇಸವಿ ಮೇ, ಜೂ ಮಾಹೆಗಳಲ್ಲಿ ಮಂಜೂರಾದ ಡಿಸ್ಟ್ರಿಕ್ಟ ಫಂಡು ಕಾಂಗಾರಿಗಳ ಲಿಸ್ಟುಗಳನ್ನು ಓದಿ ಮಂಜೂರ ಮಾಡಲಾಯಿತು.

XI. ಎಗ್ಜಿಕ್ಯೂಟಿವ್ ಇಂಜನಿಯರ್ ಯವರಿಂದ ತಲ್ಪಿದ ಪ್ರಸಿಡೆಂಬರವರ ಕಾಂಟರ್ ಸೈ ಆದ ಅಂದಾಜುಗಳ ಲಿಸ್ಟು ಓದಿ ಮಂಜೂರ್ಮಾಡಲಯಿತು.

XII. ಸ್ಞ 1907ನೆ ಇಸವಿ ಜೂ 30ನೆ ತಾರೀಖಿನಲ್ಲಿ ನೀಂಕಲಾ ನಿಂತ ಡಿಸ್ಟ್ರಿಕ್ಟ ಫಂಡು ಕಾಮುಗಾರಿಗಳ ಲಿಸ್ಟನ್ನು ಓದಲಾಯಿತು.

ಗವರ್ನಮೆಂಟಿ ಮಂಜೂರಾತಿಗಾಗಿ ಸದರಿ ಲಿಸ್ಟನ್ನು ಜರನಲ್ ಮತ್ತು ರವಿನ್ಯೂ ಸೆಕ್ರಟೇರಿಯವರಲ್ಲಿಗೆ ಕಳುಹಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

XIII. ಗ್ರಾಮ ಬಡಾವಣೆ ಬಗ್ಗೆ ಸ್ಥಳದಲ್ಲಿ ಗ್ರಾಮ ಇಟ್ಟೋಣ ಮತ್ತು ಹೊಸದಾಗಿ ಗ್ರಾಮಗಳನ್ನು ಕಟ್ಟೋಣ ಈ ಸಂಬಂಧವಾದ ನಡವಳಿಕೆಗಳ್ಯಾವತ್ತೂ ಡಿಸ್ಟ್ರಿಕ್ಟ ಬೋರ್ಡಿನವರ ಪ್ರವೇಶವಿಲ್ಲದೇ ರವಿನ್ಯೂ ಏಜೆನ್ಸಿ ಮೂಲಕವೇ ಸೀದಾ ನಡವಳಿಕೆ ನಡಿಸತಕ್ಕದ್ದೆಂದು ವಗ್ಯೆರೆ ನಮೂದಾದ 15—7—07ನೆ ನಂಬರ್ 478-87—L. B. 127-06—7ನೆ ನಂಬರು ಗವರ್ನಮೆಂಟ್ ಪ್ರೊಸೀಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

XIV. ಮುಂದಿನ ಡಿಸ್ಟ್ರಿಕ್ಟ ಬೋರ್ಡ್ ಮೀಟಿಂಗ್ ಸ್ಞ 1907ನೆ ಇಸವಿ ಸೆಪ್ಟಂಬರು ತಾರೀಖು 27ರಲ್ಲು ಮಧ್ಯಾಹ್ನ 3 ಘಂಟೆಗೆ ನಡಿಸತಕ್ಕದ್ದೆಂದು ತೀರ್ಮಾನಿಸಲಾಯಿತ.

ಕೆ. ಥೊರೆಸ್ವಾಮಿ ಅಯ್ಯರ್,
ಪ್ರೆಸಿಡೆಂಟ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ಸ್ಞ 1908ನೆ ಇಸವಿ ಫೆಬ್ರವರಿ ಮಾಹೆ 19ನೆ ತಾರೀಖಿನಲ್ಲಿ ಪ್ರಾರಂಭವಾಗಿ ಹತ್ತು ದಿನಗಳ ವರೆಗೂ, ಹೊನ್ನಾಳಿ ತಾಲ್ಲೂಕು ರಾಂಪುರದಲ್ಲಿ ನಡೆಯುವ ಜಾತ್ರೆ ಕಾಲದಲ್ಲಿ ಗವರ್ನಮೆಂಟಿನಿಂದ ತಲ್ಪಿರುವ 22—12—06ನೆ ಮುಕ್ಕಂ 5540-1—L. F. 495-05—4ನೆ ನಂಬರ್ ಪ್ರೊಸೀಡಿಂಗ್ಸ ಪ್ರಕಾರ ದನಗಳ ಪ್ರದರ್ಶನವು ನಡೆಯುತ್ತದೆ.

2. ಜಾತ್ರೆ ನಡೆಯುವ ರಾಮೆಪುರ ಗ್ರಾಮದ ಸಮೀಪದಲ್ಲಿ ಸಾಸವೆಹಳ್ಳಿಗೆ ಹೋಗುವ ಕಾಲುದಾರಿ ಪಕ್ಕದ, ಮೈದಾನಿನಲ್ಲಿ ಪ್ರದರ್ಶನವು ನಡೆಯಲು ಏರ್ಪಡಿಸಿರುತ್ತೆ.

3. ಗಾಡಿ ಎತ್ತು ಜೊತೆ 1ಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೆ ಬಹುಮಾನ 10 ರೂಪಾಯಿ, ಉಳುವ ಎತ್ತು ಜೊತೆ ಒಂದಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೆ ಬಹುಮಾನ 10 ರೂಪಾಯಿ, ಅತ್ಯುತ್ತಮವಾದ ಬೀಜದ ಹೋರಿ ಬಂದಕ್ಕೆ ಬಂದನೆ ಬಹುಮಾನ 15 ರೂಪಾಯಿ, ಅತ್ಯುತ್ತಮವಾದ ಹಸು ಬಂದಕ್ಕೆ ಬಂದನೆ ಬಹುಮಾನ 15 ರೂಪಾಯಿ, ಅತ್ಯುತ್ತಮವಾದ ಎಮ್ಮೆ 1ಕ್ಕೆ ಬಂದನೆ ಬಹುಮಾನ 10 ರೂಪಾಯಿ, ಈ ರೀತಿ 7 ಬಹುಮಾನಗಳು ಕೊಡಲ್ಪಡುತ್ತವೆ.

4. ಬಹುಮಾನಗಳನ್ನು ಕೊಡಲು ಉತ್ತಮ ಜಾನುವಾರುಗಳನ್ನು ಆರಿಸಲು ಒಂದು ಕಮಿಟಿ ಏರ್ಪಡಿಸುತ್ತೆ. ಪ್ರದರ್ಶನವು ಮುಗಿದ ಕೂಡ್ಲೆ ಇನಾಂ ಹಂಚಲ್ಪಡುತ್ತದೆ.

5. ಮೇಲ್ಕಂಡ ದ್ರವ್ಯ ರೂಪದ ಇನಾಂ ಅಲ್ಲದೆ ಒಂದು ಯೋಗ್ಯತಾ ಪತ್ರವು (Certificate) ದೊರಿಯುತ್ತದೆ.

6. ಇನಾಂ ಪಡೆಯಲು ಲಾಯಕ್ಕಾದ ಜಾನುವಾರು ಪ್ರದರ್ಶನಕ್ಕೆ ಬಾರದೆ ಇದ್ದಲ್ಲಿ ಸದರಿ ಇನಾಂ ಅನಾಮತ್ತಿನಲ್ಲಿಡುವದಕಾಗಲಿ, ಅಥವಾ ಇನಾಮಿಗೆ ಅರ್ಹವಾದ ಇತರ ತರಗತಿ ಜಾನುವಾರುಗಳಿಗೆ ಕೊಡುವದಕ್ಕಾಗಲಿ ಕಮಿಟಿ ಮೆಂಬರುಗಳು ಅಧಿಕಾರವುಳ್ಳವರಾಗಿರುತ್ತಾರೆ.

7. ಜಾನುವಾರುಗಳನ್ನು ಪ್ರದರ್ಶನ ಮಾಡಲು ಇಷ್ಟವುಳ್ಳವರು, ಹೊನ್ನಾಳಿ ತಾಲ್ಲೂಕು ಅವುಲ್ದಾರ್ರವರಿಗೆ ಆಗಲಿ, ಅಥವಾ ಅವರಿಂದ ನೇಮಕ ಮಾಡಲ್ಪಟ್ಟ ಇತರ ನೌಕರರಿಗೆ ಆಗಲಿ, ಪ್ರದರ್ಶನ ಪುರುವಾಗುವದಕ್ಕೆ ಮುಂಚಿತವಾಗಿ ಒಂದು ದಿವಸಕ್ಕೆ ಕಮ್ಮಿ ಇಲ್ಲದೆ ಅವಕಾಶವಿರುವಂತೆ, ಬರೆದು ತಮ್ಮ ಹೆಸರು ಜಾನುವಾರು ತಪಶೀಲು ದಾಖಲ್ಮಾಡಿಸಬೇಕು.

8. ಪ್ರದರ್ಶನಕೆ ಸೇರುವ ಜಾನುವಾರುಗಳಿಗಾಗಲಿ, ಅಥವಾ ಅವುಗಳಿಂದ ಜನಗಳಿಗೆ ಆಗಲಿ, ಯಾವ ಅಪಾಯವೂ ಸಂಭವಿಸದಂತೆ ಅವುಗಳ ಮಾಲೀಕರು ನೋಡಿಕೊಳ್ಳಬೇಕು.

9. ಸ್ಥಳದಲ್ಲಿ ಜಮಾಯಿಸಲಹುದಾದ ರಾತ್ರೀಬು ಜಾನುವಾರುಗಳಿಗೆ ಸಾಲದೆ ಹೋಗಬಹುದಾದ್ದರಿಂದ ಪ್ರದರ್ಶನದಲ್ಲಿ ಸೇರಬಹುದಾದ ಜಾನವಾರುಗಳಿಗೆ ರಾತ್ರೀಬಿನ ಏರ್ಪಾಡು ಅವುಗಳ ಮಾಲೀಕರೆ ನೋಡಿಕೊಳ್ಳುವದು ಒಳ್ಳೀದು.

10. ಈ ಜಾತ್ರೆಗೆ ಬಹಳ ಜನಗಳು ಮತ್ತು ಜಾನುವಾರು ಸೇರುವದರಿಂದ ವ್ಯಾಪಾರ ಬಹಳ ಚನ್ನಾಗಿ ನಡಿಯುತ್ತೆ.

460

11. 1907ನೆ ಇಸವಿ ಮಾರ್ಚಿ ತಿಂಗಳಲ್ಲಿ ಕೂಡ್ಲಿ ಜಾತ್ರೆ ಕಾಲದಲ್ಲಿ ನಡದ ಪ್ರದರ್ಶನ ಕಾಲದಲ್ಲಿ ಬಹುಮಾನ ಕೊಡಲ್ಪಟ್ಟದ್ದರ ತಪಶೀಲ್ ಈ ಕೆಳಗೆ ನಮೂದಿಸಿರುತ್ತೆ.

ನಂಬರು.	ಪ್ರದರ್ಶನ ಮಾಡಿದ ಮಾಲೀಕನ ಹೆಸರು.			ಬಹುಮಾನದ ತಪಶೀಲ್.		
	ಹೆಸರು.	ವಾಸವಾಗಿರುವ ಗ್ರಾಮ.	ತಾಲ್ಲೂಕು.	ಯಾತಕ್ಕೋಸ್ಕರ ಬಹುಮಾನ ಕೊಟ್ಟದ್ದು.	ಮೊಬಲಗು.	ಬಹುಮಾನದ ತರಗತಿ.
					ರೂ.	
1	ರುದ್ರಪ್ಪ ಬಿ॥ ಶಿವಪ್ಪ ...	ನ್ಯಾಮತಿ ...	ಹೊನ್ನಾಳಿ ...	ಉಳುವ ಎತ್ತುಗಳ ಜೊತೆಗೆ	20	1ನೆ ಬಹುಮಾನ
2	ರಾಮರಾವ್ ಬಿ॥ ಹನುಮಂತರಾವ್.	ಕಿಬ್ಲಿಪುರ ...	ಶಿವಮೊಗ್ಗ ...	ಡಿಟೋ ...	10	2ನೆ ಡಿಟೋ
3	ಹಾಲಪ್ಪ ಬಿ॥ ಹರಗಪ್ಪ...	ಸುಂಕದಕಟ್ಟೆ ..	ಹೊನ್ನಾಳಿ ...	ಬೀಜದ ಹೋರಿ ಬಂದಕ್ಕೆ.	15	1ನೆ ಡಿಟೋ
4	ಮಹದೇವಪ್ಪ ಬಿ॥ ಮಲ್ಲಪ್ಪ	ತ್ಯಾವಣಿಗಿ ...	ಚನ್ನಗಿರಿ ...	ಗಾಡಿ ಎತ್ತಿನ ಜೊತೆ 1ಕ್ಕೆ.	10	2ನೆ ಡಿಟೋ

ಎ. ವೇದಾಂತದೇಸಿಗಂ ಐಯ್ಯಂಗಾರ್,
ಫಾರ್ ಪ್ರೆಸಿಡೆಂಟ್.

ಬೆಂಗಳೂರು ಸಬಾರ್ಡಿನೇಟ್ ಜಡ್ಜರವರ ಕೋರ್ಟಿನಲ್ಲಿ.

ಸ್ರ॥ 1907—08ನೆ ಇಸವಿ ಮಿ॥ ಅರ್ಜೀ ನಂಬರ್ 64.

ಬೆಂಗಳೂರಲ್ಲಿದ್ದು ಮೃತಪಟ್ಟ ಸುಬ್ಬಮ್ಮ ಮತ್ತು ದಾಸಪ್ಪ ಇವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಪೆದ್ದಕ್ಕ, ಮೃತಪಟ್ಟ ಸದರೀ ಸುಬ್ಬಮ್ಮ ದಾಸಪ್ಪನವರಿಗೆ ಖಾಸ ಅವ್ವ ಆಗಬೇಕೆಂಬ ಹಕ್ಕುದಾರಿ ಮೇಲೆ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಸುಬ್ಬಮ್ಮ ದಾಸಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 1,740 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಸ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಪೆದ್ದಕ್ಕನ ಅರ್ಜಿಯನ್ನು ಸ್ರ॥ 1907ನೆ ಇಸವಿ ಸೆಪ್ಟಂಬರು ತಿಂಗಳು 6ನೆ ತಾರೀಖು ಶುಕ್ರವಾರದಲ್ಲೂ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಮ್ಮ ವಗೈರೇರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ॥ 1907ನೆ ಇಸವಿ ಆಗಸ್ಟು ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ರ॥ 1907—08ನೆ ಇಸವಿ ಮಿ॥ ಅರ್ಜಿ ನಂಬರ್ 103.

ಬೆಂಗಳೂರು ಸುಲ್ತಾನ್‌ಪೇಟೆಲಿರುವ ನಾಗಪ್ಪಾಚಾರಿ ಮಗ ವೆಂಕಟರಮಣ್ಯೆಯ್ಯ—

ಮೃತಪಟ್ಟ ಬಾಲಾಚಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ವೆಂಕಟರಮಣಯ್ಯ, ಮೃತಪಟ್ಟ ಸದರೀ ಬಾಲಾಚಾರ್ರಿಗೆ ಖಾಸ ತಂದೆಯಾಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಬಾಲಾಚಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 227—8—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟರಮಣ್ಯೆಯ್ಯನ ಅರ್ಜಿಯನ್ನು ಸ್ರ॥ 1907ನೆ ಇಸವಿ ಸೆಪಟಂಬರ್ ತಿಂಗಳು 6ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಬಾಲಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ॥ 1907ನೆ ಇಸವಿ ಆಗಸ್ಟು ತಿಂಗಳು 17ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ರ॥ 1907—08ನೆ ಇಸವಿ ಮಿ॥ ಅರ್ಜೀ ನಂಬರ್ 120.

ಬೆಂಗಳೂರಲ್ಲಿ ಡಿಸ್ಟ್ರಿಕ್ಟ್ ಟ್ರೆಜರೀಲಿ ಅಕೌಂಟೆಂಟ್ ಆಗಿದ್ದು ಮೃತಪಟ್ಟ ವಾಸುದೇವರಾವ್ ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1. ಯಮುನಾಬಾಯಿ, 2. ಗೋಪಿಬಾಯಿ, ಮೃತಪಟ್ಟ ಸದರೀ ವಾಸುದೇವರಾಯರಿಗೆ ಖಾಸಾ ಅಕ್ಕ ಆಗಬೇಕೆಂಬ ಹಕ್ಕುದಾರಿ ಮೇಲೆ ಯಮುನಾಬಾಯಿ, ಗೋಪಿಬಾಯಿ ಸ್ಥಳದ ವಾಸಸ್ಥರಾಗಿ ಮೃತಪಟ್ಟ ವಾಸುದೇವ